# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಲೋಕ್/ಬಿಡಿ/1437/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 18/10/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಕೆ. ಆರ್. ಶಿವಾನಂದಯ್ಯ @ ಶಿವಾನಂದ್ ಬಿನ್ ಲೇಟ್ ರಾಮಯ್ಯ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯ್ತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ತುಮಕೂರು ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಕೆ. ಆರ್. ಶಿವಾನಂದಯ್ಯ @ ಶಿವಾನಂದ್ ಬಿನ್ ಲೇಟ್ ರಾಮಯ್ಯ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯ್ತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಹೆಚ್. ಡಿ. ಸುಧೀರ್ ಬಿನ್ ದಕ್ಷಿಣಮೂರ್ತಿ, ವಾಸ: ಜಿರಾಯ್ತಿ, ಹಾಲುಗೋಣ ಗ್ರಾಮ, ಶೆಟ್ಟಿಗೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ತಾಲೂಕ್, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸವನ್ನು ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ಸಲ್ಲಿಸಿದ ವರದಿಯ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2) **ದೂರಿನ ಸಂಕ್ಷಿಪ್ತ ಸಾರಾಂಶ:–** ದೂರುದಾರರು ವ್ಯವಸಾಯ ಮಾಡಿಕೊಂಡು ಹಾಲುಗೋಣ ಗ್ರಾಮದಲ್ಲಿ ವಾಸವಾಗಿರುತ್ತಾರೆ. ದೂರುದಾರರಿಗೆ ಸೇರಿದ ಸ. ನಂ. 127 ಜಮೀನಿನಲ್ಲಿ 2016 ರಲ್ಲಿ ಎಮ್.ಜಿ.ಎನ್.ಆರ್.ಇ.ಜಿ.ಎ. ಅಡಿಯಲ್ಲಿ ಕೃಷಿ ಹೊಂಡ, ಕೊಟ್ಟಿಗೆ, ಉದಿಬದು ಕೆಲಸಗಳನ್ನು ಮಾಡಲು ಅವರ ತಂದೆಯು ಅನುಮತಿಯನ್ನು ಪಡೆದು ಕೆಲಸವನ್ನು ಮುಕ್ತಾಯ ಮಾಡಿರುತ್ತಾರೆ. ಜೆ. ಸಿ. ಪುರ ಪಂಚಾಯತಿಯ ಅಧಿಕಾರಿಗಳಿಗೆ ತಾವು ಮಾಡಿರುವ ಕೆಲಸವನ್ನು ತೋರಿಸಿ ಸರ್ಕಾರದಿಂದ ರೈತರಿಗೆ ಕೊಡುವ ಬಿಲ್ಲನ್ನು ಮಾಡಿಕೊಡುವಂತೆ ದೂರುದಾರರ ತಂದೆಯವರು ಎದುರುದಾರರನ್ನು ಹೋಗಿ ಕೇಳಿದಾಗ ಎದುರುದಾರರು ದೂರುದಾರರಿಗೆ ಬರಬೇಕಾಗಿರುವ ರೂ. 70,000/– ದಲ್ಲಿ 35,000/– ರೂಪಾಯಿಗಳಿಗೆ ಮಾತ್ರ ಮಂಜೂರು ಮಾಡಿದ್ದು ಉಳಿದ 35,000/– ರೂ.ಗಳನ್ನು ಮಂಜೂರು ಮಾಡಿಕೊಡುವಂತೆ ಕೇಳಿದಾಗ ಎದುರುದಾರರು ದೂರುದಾರರಿಗೆ ಹಳೆಯ ಬಿಲ್ಲು ಮಾಡಿದ್ದಕ್ಕೆ ದುಡ್ಡು ಕೊಟ್ಟಿಲ್ಲ, ಮತ್ತೆ ಸಪ್ಲೈ ಬಿಲ್ಲು ಮಾಡೋಕೆ ದುಡ್ಡು ಕೊಡಬೇಕು ಎಂದು ಲಂಚದ ಹಣಕ್ಕೆ ಪೀಡಿಸುತ್ತಿದ್ದುದ್ದರಿಂದ ದೂರುದಾರರು ತನ್ನ ತಂದೆಯ ಬದಲಿಗೆ ಎದುರುದಾರರನ್ನು 2–3 ಬಾರಿ ಹೋಗಿ ಕೇಳಿದಾಗಲೂ ಸಹ ಎದುರುದಾರರು "ನನ್ನ ಷೇರನ್ನು ಕೊಡು, ಬಿಲ್ ಮಾಡಿಸಿ ಕೊಡುತ್ತೇನೆ" ಎಂದು ತಿಳಿಸಿತ್ತಾರೆ. ಆದ ಕಾರಣ ದೂರುದಾರರು ದಿನಾಂಕ 05/04/2017 ರಂದು ಮಧ್ಯಾಹ್ನ ಸುಮಾರು 12–30 ಘಂಟೆಗೆ ತನ್ನ ಸ್ನೇಹಿತ ಹಾಗೂ ಪಂಚಾಯತ ಸದಸ್ಯನಾದ ಸುನೀಲ್ ರವರ ಜೊತೆಯಲ್ಲಿ ಪಂಚಾಯತಿ ಆಫೀಸಿಗೆ ಹೋಗಿ ಎದುರುದಾರರನ್ನು ಉಳಿದ ಬಿಲ್ಲಿನ ಹಣವನ್ನು ಕೊಡಿಸಿಕೊಡುವಂತೆ ಕೇಳಿದಾಗ ಎದುರುದಾರರು ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ಆಗ ದೂರುದಾರರು "ನಾನು ಎಷ್ಟು ಕೊಡಬೇಕು" ಎಂದು ಕೇಳಿದಾಗ "ನೀನೇನು ಕೋಟಿ ಕೊಡುತ್ತೀಯಾ ಕೊಡು ನೀನೇ ಹೇಳು ಎಷ್ಟು ಕೊಡುತ್ತೀಯಾ" ಅಂತ ಹೇಳಿ 10 ಸಾವಿರ ಕೊಡುವಂತೆ ಎದುರುದಾರರು ಕೇಳಿರುತ್ತಾರೆ. ಆಗ ದೂರುದಾರರು 10 ಸಾವಿರ ಹೆಚ್ಚಾಯಿತು ಅಂದಾಗ ಕಡೆಯದಾಗಿ 3,000/– ರೂ. ಲಂಚದ ಹಣವನ್ನು ಕೊಡುವಂತೆ ತಿಳಿಸಿರುತ್ತಾರೆ. ದೂರುದಾರರು ಈಗ 500/– ರೂ. ಇದೆ ಇಟ್ಟುಕೊಳ್ಳಿ, ನಾಳೆ ನೋಡೋಣ ಎಂದಾಗ 500/– ರೂಪಾಯಿಯನ್ನು ಎದುರುದಾರರು ವಾಪಸ್ ಕೊಟ್ಟು ನಾಳೆ ಒಟ್ಟಿಗೆ

ಕೊಡು ಎಂದು ಹೇಳಿರುತ್ತಾರೆ. ದೂರುದಾರರು ಅಲ್ಲಿ ನಡೆದ ಈ ಎಲ್ಲಾ ಸಂಭಾಷಣೆಯನ್ನು ತಮ್ಮ ಮೊಬೈಲಿನಲ್ಲಿ ವಿಡಿಯೋ ರೆಕಾರ್ಡಿಂಗ್ ಮಾಡಿಕೊಂಡಿರುತ್ತಾರೆ.

3) ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 06/04/2017 ರಂದು ಬೆಳಿಗ್ಗೆ 11–00 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ತುಮಕೂರು ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 04/2017 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರಾದ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4) ನಂತರ ತನಿಖಾಧಿಕಾರಿಗಳು ದಿನಾಂಕ 06/04/2017 ರಂದು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ದೂರುದಾರರು ಹಾಜರುಪಡಿಸಿದ ಮೆಮೋರಿ ಕಾರ್ಡಿನಲ್ಲಿನ ಸಂಭಾಷಣೆಯನ್ನು ತಮ್ಮ ಲ್ಯಾಪ್‌ಟಾಪ್‌ನಲ್ಲಿ ಹಾಕಿ ನಂತರ ಲ್ಯಾಪ್ ಟಾಪ್‌ನಿಂದ ಒಂದು ಡಿ.ವಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ ಮತ್ತು ದೂರುದಾರರು ಹಾಜರುಪಡಿಸಿದ ಮೆಮೋರಿ ಕಾರ್ಡನ್ನೂ ಸಹ ಮುಂದಿನ ತನಿಖೆಗಾಗಿ ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ.

5) ದಿನಾಂಕ 06/04/2017 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಎರಡು ಇಲಾಖಾ ವಾಹನದಲ್ಲಿ ಹೊರಟು ಜಯಚಾಮರಾಜಪುರ ಗ್ರಾಮಕ್ಕೆ ಬಂದು ನೆರಳು ಸಾಕ್ಷಿ ಹಾಗೂ ದೂರುದಾರರಿಗೆ ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ನೀಡಿದ ಸೂಚನೆಗಳನ್ನು ಮತ್ತೊಮ್ಮೆ ನೆನಪಿಸಿ ಎದುರುದಾರರನ್ನು ಭೇಟಿಯಾಗಲು ಎದುರುದಾರರ ಕಛೇರಿಗೆ ಕಳುಹಿಸಿಕೊಟ್ಟಿರುತ್ತಾರೆ. ಅವರಿಬ್ಬರೂ ತನಿಖಾಧಿಕಾರಿಯವರ ಸೂಚನೆಯಂತೆ ಜೆ.ಸಿ. ಪುರ ಗ್ರಾಮ ಪಂಚಾಯ್ತಿಯ ಕಛೇರಿಗೆ ಹೋದಾಗ ದೂರುದಾರರ ಸ್ನೇಹಿತನಾದ ಸುನೀಲ್‌ರವರು ಹಾಜರಿದ್ದು ಎದುರುದಾರರು ಚಿಕ್ಕನಾಯಕನಹಳ್ಳಿ ತಾಲ್ಲೂಕು ಪಂಚಾಯ್ತಿ ಕಛೇರಿಯ ಮೀಟಿಂಗ್‌ಗಾಗಿ ಅಲ್ಲಿಗೆ ಹೋಗಿರುತ್ತೀರೆಂದು ತಿಳಿಸಿರುತ್ತಾರೆ. ಹಾಗಾಗಿ ತನಿಖಾಧಿಕಾರಿಗಳು ಎಲ್ಲರನ್ನೂ

ಕರೆದುಕೊಂಡು ಚಿಕ್ಕನಾಯಕನಹಳ್ಳಿ ತಾಲ್ಲೂಕು ಪಂಚಾಯ್ತಿ ಕಚೇರಿಯ ಪಕ್ಕದ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿ ತನಿಖಾಧಿಕಾರಿಗಳು, ದೂರುದಾರರು ಮತ್ತು ನೆರಳು ಸಾಕ್ಷಿಯಾದ ಮಹಂತೇಶ್‌ರವರಿಗೆ ಮತ್ತೊಮ್ಮೆ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನೀಡಿದ ಸೂಚನೆಗಳನ್ನು ನೆನಪಿಸಿ ಎದುರುದಾರರನ್ನು ಭೇಟಿಯಾಗಲು ಕಳುಹಿಸಿಕೊಟ್ಟಿರುತ್ತಾರೆ. ದೂರುದಾರರು ನೆರಳು ಸಾಕ್ಷಿಯೊಂದಿಗೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಪಂಚಾಯ್ತಿ ಕಛೇರಿಯ ಒಳಗಡೆ ಬಂದಾಗ ಎದುರುದಾರರು ಕಛೇರಿಯ ಐ.ಬಿ. ಕಡೆಗಿನ ನೇಚರ್ ಪ್ರೆಶ್ ಟೀ ಅಂಡ್ ಜ್ಯೂಸ್ ಸೆಂಟರ್ ಬಳಿ ಇರುವುದನ್ನು ಕಂಡು ಹೋಗಿ ಮಾತನಾಡಿಸುತ್ತಿದ್ದಾಗ ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಮೆಂಬರ್ ಕಲ್ಲೇಶ್ ರವರು ಬಂದಿದ್ದರಿಂದ ಎದುರುದಾರರು ದೂರುದಾರರ ಬಳಿ ಲಂಚದ ಹಣವನ್ನು ಕೇಳಿ ಪಡೆದಿರುವುದಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಕಲ್ಲೇಶ್‌ರವರು ಕಾರಿನಲ್ಲಿ ಹೊರಟು ಹೋದ ಮೇಲೆ ಎದುರುದಾರರು ದೂರುದಾರರನ್ನು ಜೊತೆಯಲ್ಲಿ ಬರುವಂತೆ ತಿಳಿಸಿ ತಾಲ್ಲೂಕು ಪಂಚಾಯ್ತಿ ಆಫೀಸಿನೊಳಗೆ ಕರೆದುಕೊಂಡು ಹೋಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಕುಳಿತು ಕರ್ತವ್ಯ ನಿರ್ವಹಿಸುವ ಛೇಂಬರಿನ ಮುಂಭಾಗದ ಹಾಲ್‌ನಲ್ಲಿ ದೂರುದಾರರಿಂದ ಲಂಚದ ಹಣವಾದ ರೂ. 3,000/- ಹಣವನ್ನು ಕೇಳಿದಾಗ ಅವರು ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಎದುರುದಾರರಿಗೆ ಕೊಟ್ಟಿದ್ದನ್ನು ಪಡೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರು ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ನೀಡಿದ ಸೂಚನೆಯಂತೆ ತಮ್ಮ ಕೈಗಳಿಂದ ತಲೆಯನ್ನು ಹಿಂದಕ್ಕೆ ವರೆಸಿಕೊಳ್ಳುವುದರ ಮೂಲಕ ಸಿಗ್ನಲ್‌ನ್ನು ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಲಂಚದ ಹಣದ ಸಮೇತ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಅದೇ ರೀತಿ ಎದುರುದಾರರ ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳಿಗೆ, ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ ಎದುರುದಾರರು ತನ್ನ ಪ್ಯಾಂಟಿನ ಎಡಭಾಗದ ಜೇಬಿನಲ್ಲಿದ್ದ 3,000/- ರೂ.ಗಳ ಲಂಚದ ಹಣವನ್ನು ಟೇಬಲ್ ಮೇಲೆ ಹಾಜರುಪಡಿಸಿದಾಗ ತನಿಖಾಧಿಕಾರಿಗಳು ಪಂಚರ

ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಬದಲೀ ಪ್ಯಾಂಟಿನ ವ್ಯವಸ್ಥೆ ಮಾಡಿ ಎದುರುದಾರರು ಧರಿಸಿದ ಪ್ಯಾಂಟನ್ನು ಹಾಜರುಪಡಿಸಲು ತಿಳಿಸಿದಾಗ ಅವರು ಪ್ಯಾಂಟನ್ನು ಹಾಜರುಪಡಿಸಿದಾಗ ತನಿಖಾಧಿಕಾರಿಗಳು ಪ್ಯಾಂಟಿನ ಎಡಭಾಗದ ಜೇಬಿನ ಒಳಪದರವನ್ನು ಹೊರತೆಗೆದು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ದ್ರಾವಣಗಳನ್ನು ಹಾಗೂ ಪ್ಯಾಂಟನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾ ರರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ್ದ ವಾಯ್ಸ್ ರೆಕಾರ್ಡರ್ ಬಗ್ಗೆ ವಿಚಾರಿಸಿದಾಗ ದೂರುದಾರರು ಎದುರುದಾರರನ್ನು ಭೇಟಿ ಮಾಡಲು ಹೋದಾಗ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿಕೊಳ್ಳುವುದನ್ನು ಮರೆತಿರುವುದರಿಂದ ಸಂಭಾಷಣೆಯ ರೆಕಾರ್ಡ್ ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ನೆರಳು ಸಾಕ್ಷಿಯನ್ನು ಘಟನೆಯ ಬಗ್ಗೆ ಕೇಳಿದಾಗ ಅವರು ತಾನು ದೂರುದಾರರೊಂದಿಗೆ ಇದ್ದು ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿದ್ದನ್ನು ನೋಡಿ ದೂರುದಾರರು ಕಛೇರಿಯಿಂದ ಹೊರಗೆ ಬಂದು ತಮ್ಮ ಕೈಗಳಿಂದ ತಲೆಯನ್ನು ಹಿಂದಕ್ಕೆ ವರೆಸಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್‌ನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಆ ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ 3,000/- ರೂ.ಗಳ ಲಂಚದ ಹಣವನ್ನು ಪಡೆದ ಬಗ್ಗೆ ವಿಚಾರಿಸಿದಾಗ ಎದುರುದಾರರು ತಮ್ಮ ಸಮಜಾಯಿಷಿಯನ್ನು ಒಂದು ಬಿಳಿ ಹಾಳೆಯಲ್ಲಿ ಸ್ವ ಇಚ್ಛೆಯಿಂದ ತಮ್ಮ ಕೈ ಬರಹದಲ್ಲಿ ಬರೆದುಕೊಟ್ಟಿದ್ದು ಅದರಲ್ಲಿ "ದಿ: 6/4/2017 ರಂದು ಮಧ್ಯಾಹ್ನ ಹೆಚ್. ಜೆ.ಸುನೀಲ್ ರವರು ಕರೆ ಮಾಡಿ ಸುಧೀರ ಹತ್ತಿರ ಹಣ ಕೊಟ್ಟು ಕಳುಹಿಸಿದ್ದೇವೆ. ಇವತ್ತು ಎಲ್ಲಿಗೂ ಹೋಗಬಾರದು, ತಾಲ್ಲೂಕು ಪಂಚಾಯತ್ ಹತ್ತಿರನೇ ಇರು, ಇವತ್ತು ನಮ್ಮಗಳ ಕೆಲಸ ಮಾಡಿಕೊಡು ಎಂದು ತಾಕೀತು ಮಾಡಿದ್ದು ನಾನು ಅದು ಸಾಧ್ಯವಿಲ್ಲ ಎಂದಾಗ ನನಗೆ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿರುವ ಒಂದು ರೂಮಿಗೆ ಕರೆದುಕೊಂಡು ಬಂದು ಬಲವಂತವಾಗಿ ನನ್ನ ಕೈಗೆ ಹಣ ಕೊಡಿಸಿ ತುಮಕೂರು ಭ್ರಷ್ಟಾಚಾರ ನಿಗ್ರಹದಳರವರಿಗೆ ಹಿಡಿದುಕೊಟ್ಟು ಸಿಕ್ಕಿಸಿದ್ದಾರೆ. ನಾನು ಇವರಿಗೆ ಇವರು ಹೇಳಿದ ಎಲ್ಲಾ ಕೆಲಸಗಳನ್ನು ಮಾಡಿಕೊಡಲಿಲ್ಲ ಎಂಬ ಕಾರಣಕ್ಕಾಗಿ ಈ ರೀತಿ

ಮಾಡಿರುತ್ತಾರೆ" ಎಂದು ನಮೂದಿಸಿದ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಹಾಗೂ ದೂರುದಾರರನ್ನು ಕೇಳಿದಾಗ ಅವರಿಬ್ಬರೂ ಲಿಖಿತ ವಿವರಣೆ ತಪ್ಪಾಗಿರುವುದಾಗಿ ತಿಳಿಸಿ ಎದುರುದಾರರು ಈ ದಿನ ಲಂಚದ ಹಣವನ್ನು ಕೇಳಿ ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ಹಾಗಾಗಿ ಎದುರುದಾರರು ನೀಡಿದ ಸಮಜಾಯಿಷಿ ಒಪ್ಪಲು ಬರಲಾರದು.

6) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

8) ಎದುರುದಾರರು ತಮ್ಮ ಸಮಜಾಯಿಸಿಯನ್ನು ದಿನಾಂಕ 17/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಸಿಯನ್ನು ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಸಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

9) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರಿಗೆ ಸೇರಿದ ಸ. ನಂ. 127 ಜಮೀನಿನಲ್ಲಿ 2016 ರಲ್ಲಿ ಎಮ್.ಜಿ.ಎನ್.ಆರ್.ಇ.ಜಿ.ಎ. ಅಡಿಯಲ್ಲಿ ಕೃಷಿ ಹೊಂಡ, ಕೊಟ್ಟಿಗೆ, ಉದಿಬದು ಕೆಲಸಗಳನ್ನು ಮಾಡಲು ಅವರ ತಂದೆಯು ಅನುಮತಿಯನ್ನು ಪಡೆದು ಕೆಲಸವನ್ನು

ಮುಕ್ತಾಯ ಮಾಡಿರುತ್ತಾರೆ. ಜೆ. ಸಿ. ಪುರ ಪಂಚಾಯತಿಯ ಅಧಿಕಾರಿಗಳಿಗೆ ತಾವು ಮಾಡಿರುವ ಕೆಲಸವನ್ನು ತೋರಿಸಿ ಸರ್ಕಾರದಿಂದ ರೈತರಿಗೆ ಕೊಡುವ ಬಿಲ್ಲನ್ನು ಮಾಡಿಕೊಡುವಂತೆ ದೂರುದಾರರ ತಂದೆಯವರು ಎದುರುದಾರರನ್ನು ಹೋಗಿ ಕೇಳಿದಾಗ ಎದುರುದಾರರು ದೂರುದಾರರಿಗೆ ಬರಬೇಕಾಗಿರುವ ರೂ. 70,000/- ದಲ್ಲಿ 35,000/- ರೂಪಾಯಿಗಳಿಗೆ ಮಾತ್ರ ಮಂಜೂರು ಮಾಡಿದ್ದು ಉಳಿದ 35,000/- ರೂ.ಗಳನ್ನು ಮಂಜೂರು ಮಾಡಿಕೊಡುವಂತೆ ಕೇಳಿದಾಗ ಎದುರುದಾರರು ದೂರುದಾರರಿಗೆ ಹಳೆಯ ಬಿಲ್ಲು ಮಾಡಿದ್ದಕ್ಕೆ ದುಡ್ಡು ಕೊಟ್ಟಿಲ್ಲ, ಮತ್ತೆ ಸಪ್ಲೈ ಬಿಲ್ಲು ಮಾಡೋಕೆ ದುಡ್ಡು ಕೊಡಬೇಕು ಎಂದು ಲಂಚದ ಹಣಕ್ಕೆ ಪೀಡಿಸುತ್ತಿದ್ದುದ್ದರಿಂದ ದೂರುದಾರರು ತನ್ನ ತಂದೆಯ ಬದಲಿಗೆ ಎದುರುದಾರರನ್ನು 2-3 ಬಾರಿ ಹೋಗಿ ಕೇಳಿದಾಗಲೂ ಸಹ ಎದುರುದಾರರು "ನನ್ನ ಷೇರನ್ನು ಕೊಡು, ಬಿಲ್ ಮಾಡಿಸಿ ಕೊಡುತ್ತೇನೆ" ಎಂದು ತಿಳಿಸಿ, ಲಂಚದ ಹಣ ರೂ. 3,000/- ಗಳನ್ನು ಪಡೆದು ಮೇಲ್ಕಂಡ ದಾಖಲೆಗಳು ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದಾಗ ಎದುರುದಾರರು ಸಾರ್ವಜನಿಕ ಸೇವಕರಾಗಿ ಕರ್ತವ್ಯದಲ್ಲಿ ದುರ್ನಡತೆ ತೋರಿಸಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಭ್ರಷ್ಟಾಚಾರ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

10) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43-ಎ (1) (i) ರನ್ವಯ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ ಕಾರಣ ಸಕ್ಷಮ ಪ್ರಾಧಿಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 12 ಸಹವಾಚಕ 43-ಎ (2) ರನ್ವಯ ಎದುರುದಾರರನ್ನು ಪಂಚಾಯತ್ ಸದಸ್ಯತ್ವ ಸ್ಥಾನಕ್ಕೆ ಸ್ಪರ್ಧಿಸದಂತೆ ಅನರ್ಹಗೊಳಿಸಲು ಕ್ರಮ ತೆಗೆದುಕೊಳ್ಳಲುಯ ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಬರುತ್ತದೆ. ಆದುದರಿಂದ ಎದುರುದಾರರು ಗ್ರಾಮ ಪಂಚಾಯಿತಿ ಸದಸ್ಯತ್ವ ಸ್ಥಾನಕ್ಕೆ ಸ್ಪರ್ಧಿಸದಂತೆ ಅನರ್ಹಗೊಳಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 12 ಸಹವಾಚಕ 43-ಎ (2) ರನ್ವಯ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಪ್ರಕಾರ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸನ್ನು ಮಾಡಲಾಗಿದೆ.

11) ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18/10/2021

**(ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ)**
ಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.